ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ
ದಿನಾಂಕ : DATE: 4/6/2020

# ರಾಜ್ಯಸಭೆ: 4ನೇ ಸ್ಥಾನದ ಹಣಾಹಣಿ ಕುತೂಹಲ

## ಬಿಜೆಪಿಗೆ 2, ಕಾಂಗ್ರೆಸ್‌ಗೆ 1 ಸ್ಥಾನ ನಿಶ್ಚಿತ | 4ನೇ ಸ್ಥಾನಕ್ಕೆ ಜೆಡಿಎಸ್‌ಗೆ ಇತರರ ಬೆಂಬಲ ಅನಿವಾರ್ಯ | ವಿಜಯಸಂಕೇಶ್ವರ ಹೆಸರೂ ಪ್ರಸ್ತಾಪ

**ಬಿಜೆಪಿಯಲ್ಲಿ ಕೋರೆ, ಕತ್ತಿ ಜಟಾಪಟಿ ನಿಲ್ಲದಿದ್ರೆ ಸಂಕೇಶ್ವರಗೆ ಲಾಭ?**

**ಕಾಂಗ್ರೆಸ್‌ನಿಂದ ಒಂದು ಸ್ಥಾನಕ್ಕೆ ಖರ್ಗೆ ಕಣಕ್ಕಿಳಿಯುವ ಸಂಭವ**

**ಬಿಜೆಪಿಯ ಎರಡನೇ ಸ್ಥಾನ ಹೈಕಮಾಂಡ್ ನಿರ್ಧಾರಕ್ಕೆ ಬಿಡುವ ನಿರೀಕ್ಷೆ**

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯಸಭಾ ಚುನಾವಣೆಗೆ ಮುಹೂರ್ತ ನಿಗದಿಯಾಗುತ್ತಿದ್ದಂತೆಯೇ ರಾಜ್ಯ ರಾಜಕಾರಣದಲ್ಲಿ ಮಿಂಚಿನ ಸಂಚಲನ ಉಂಟಾಗಿದ್ದು, ಕೊರೋನಾ ಸಂಕಷ್ಟದ ನಡುವೆಯೂ ಪ್ರಮುಖ ಮೂರು ಪಕ್ಷಗಳಲ್ಲಿ ಬಿರುಸಿನ ಚಟುವಟಿಕೆ ನಡೆಯುವುದು ಸ್ಪಷ್ಟವಾಗಿದೆ.

ಬಿಜೆಪಿಯ ಪ್ರಭಾಕರ ಕೋರೆ, ಕಾಂಗ್ರೆಸ್ಸಿನ ಬಿ.ಕೆ. ಹರಿಪ್ರಸಾದ್, ರಾಜೀವ್‌ಗೌಡ ಹಾಗೂ ಜೆಡಿಎಸ್‌ನ ಕುಪೇಂದ್ರ ರೆಡ್ಡಿ ಅವರಿಂದ ತೆರವಾಗಲಿರುವ ಒಟ್ಟು ನಾಲ್ಕು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಈ ಪೈಕಿ ವಿಧಾನಸಭೆಯ ಸಂಖ್ಯಾಬಲದ ಆಧಾರದ ಮೇಲೆ ಬಿಜೆಪಿಗೆ ಎರಡು ಸ್ಥಾನ ಮತ್ತು ಕಾಂಗ್ರೆಸ್‌ಗೆ ಒಂದು ಸ್ಥಾನ ಲಭಿಸುವುದು ಖಚಿತವಾಗಿದೆ. ಒಬ್ಬ ಅಭ್ಯರ್ಥಿ ಗೆಲುವುದಕ್ಕೆ 45 ಮತಗಳು ಬೇಕು. ಆದರೆ, ನಾಲ್ಕನೇ ಸ್ಥಾನವನ್ನು ಜೆಡಿಎಸ್ ತನ್ನ ಸ್ವಂತ ಬಲದಿಂದ ಗೆಲ್ಲುವುದು ಸಾಧ್ಯವಿಲ್ಲ. ಆದಕ್ಕೆ ಕಾಂಗ್ರೆಸ್ ಅಥವಾ ಬಿಜೆಪಿಯ ಹೆಚ್ಚುವರಿ ಮತಗಳ ಬೆಂಬಲ ಬೇಕಾಗುತ್ತದೆ. ಹೀಗಾಗಿ, ನಾಲ್ಕನೇ ಸ್ಥಾನಕ್ಕಾಗಿ ನಡೆಯುವ ರಾಜಕೀಯವೇ ಈ ಚುನಾವಣೆಯಲ್ಲಿ ಕುತೂಹಲ ಮೂಡಿಸಿದೆ.





**ವಿಧಾನಸಭೆಯ ಸದಸ್ಯರ ಬಲಾಬಲ**

| | |
|---|---|
| ಬಿಜೆಪಿ | 116 |
| ಕಾಂಗ್ರೆಸ್ | 68 |
| ಜೆಡಿಎಸ್ | 34 |
| ಬಿಎಸ್‌ಪಿ | 01 |
| ಪಕ್ಷೇತರ | 02 |
| ಸ್ಪೀಕರ್ | 01 |
| ಒಟ್ಟು | 222 |

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ರಾಜ್ಯಸಭೆಗೆ ಸ್ಪರ್ಧಿಸಿದರೆ ಬೆಂಬಲ ನೀಡಲು ಸಿದ್ಧ ಎಂದು ಈಗಾಗಲೇ ಕಾಂಗ್ರೆಸ್ ಪಕ್ಷ ಮುಕ್ತವಾಗಿ ಆಫರ್ ನೀಡಿದೆ. ಪ್ರತಿಯಾಗಿ ಮುಂಬರುವ ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆಯುವ ಚುನಾವಣೆಯಲ್ಲಿ ಸಿಗುವ ಒಂದು ಸ್ಥಾನವನ್ನು ತನಗೆ ನೀಡುವಂತೆ ಷರತ್ತನ್ನೂ ವಿಧಿಸಿದೆ.

**ತೀರ್ಮಾನಿಸದ ಗೌಡರು:** ಕುಟುಂಬದ ಸದಸ್ಯರು, ಪಕ್ಷದ ಕೆಲವು ಮುಖಂಡರು ದೇವೇಗೌಡರು ರಾಜ್ಯಸಭೆಗೆ ಹೋಗಬೇಕು ಎಂಬ ಒತ್ತಾಯವನ್ನು ಮುಂದಿಟ್ಟಿದ್ದಾರೆ. ಆದರೆ, ವಯಸ್ಸು ಮತ್ತು ಆರೋಗ್ಯದ ಹಿನ್ನೆಲೆಯಲ್ಲಿ ಗೌಡರು ಇನ್ನೂ ಅಂತಿಮ ತೀರ್ಮಾನ ಕೈಗೊಂಡಿಲ್ಲ. ಬಿಜೆಪಿಯ ಬೆಂಬಲ ಪಡೆದುಕೊಂಡು ರಾಜ್ಯಸಭೆಯ ಜೊತೆಗೆ ವಿಧಾನಪರಿಷತ್ತಿನ ಒಂದು ಸ್ಥಾನವನ್ನೂ ಉಳಿಸಿಕೊಳ್ಳಬಹುದು ಎಂಬ ಅಭಿಪ್ರಾಯವನ್ನು ಜೆಡಿಎಸ್‌ನ ಹಲವು ಶಾಸಕರು ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ತನ್ನ ಪಾಲಿನ ಒಂದು ಸ್ಥಾನಕ್ಕೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಸೋಲು ಅನುಭವಿಸಿದ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಟಿಕೆಟ್ ನೀಡುವ ಸಾಧ್ಯತೆ ಹೆಚ್ಚಾಗಿದೆ.

**ಕತ್ತಿಗೆ ಸಿಗುತ್ತಾ ಟಿಕೆಟ್?:** ಇನ್ನು ಆಡಳಿತಾರೂಢ ಬಿಜೆಪಿಯಿಂದ ಹಾಲಿ ಸದಸ್ಯರಾಗಿರುವ ಪ್ರಭಾಕರ್ ಕೋರೆ ಅವರು ಮೂರನೇ ಬಾರಿ ಅವಕಾಶ ನೀಡುವಂತೆ ಲಾಬಿ ಆರಂಭಿಸಿದ್ದಾರೆ. ಇದೇ ವೇಳೆ ಮಾಜಿ ಸಂಸದ ರಮೇಶ್ ಕತ್ತಿ ಬಹಿರಂಗವಾಗಿಯೇ ತಮಗೆ ಟಿಕೆಟ್ ನೀಡಬೇಕು ಎಂದು ಹೇಳಿಕೆ ನೀಡಿದ್ದಾರೆ. ಇವರಿಬ್ಬರ ನಡುವಿನ ತಿಕ್ಕಾಟ ತೀವ್ರಗೊಂಡಲ್ಲಿ ಉದ್ಯಮಿ ವಿಜಯ ಸಂಕೇಶ್ವರ ಅವರನ್ನು ರಾಜ್ಯಸಭೆಗೆ ಕಣಕ್ಕಿಳಿಸುವ ಸಾಧ್ಯತೆಯೂ ಇದೆ. ಅಲ್ಲಿಗೆ ಒಂದು ಸ್ಥಾನ ಲಿಂಗಾಯತ ಸಮುದಾಯಕ್ಕೆ ನಿಗದಿಯಾದಂತೆ. ಇನ್ನೊಂದು ಸ್ಥಾನ ಬೇರೊಂದು ಸಮುದಾಯಕ್ಕೆ ನೀಡುವ ಬಗ್ಗೆ ವರಿಷ್ಠರ ನಿಲುವಿಗೆ ಬಿಡುವ ಸಂಭವವಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.